# ಪರಮಹಂಸ ಪೂಜಿತೆ ಶ್ರೀಮಾತೆ

**ಡಾ. ವಿಜಯಭಾರತಿ**

ಅವತಾರ ಪುರುಷರ ಲೀಲಾಸಹಾಯಕಿಯಾಗಿ ಬಂದವರಲ್ಲಿ ಹಲವರು ಅನೇಕ ವೇಳೆ ಅದೃಶ್ಯರಾಗಿ, ಹೆಚ್ಚೆಂದರೆ ಪತಿಯ ನೆರಳಾಗಿ ಬಾಳಿದ್ದನ್ನು ಕಾಣುತ್ತೇವೆ. ಆದರೆ ಶ್ರೀಶಾರದಾದೇವಿಯವರು ಸಾಕ್ಷಾತ್ ತಮ್ಮ ಪತಿ, ಅವತಾರ ಪುರುಷ ಶ್ರೀರಾಮಕೃಷ್ಣರಿಂದಲೇ ಪೂಜಿಸಲ್ಪಟ್ಟರು. ಈ ದಿವ್ಯಲೀಲೆಯ ಮಹತ್ವವನ್ನು ಕುರಿತು ಬರೆದಿರುವ ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಕನ್ನಡ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಮಾಡಿರುವ ಇವರು ಹಲವಾರು ಕನ್ನಡ ಗ್ರಂಥಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿಗಳೂ ಆಗಿರುವ ಅವರು ಸಂಗೀತದಲ್ಲೂ ಪರಿಣತರು. ದೂರದರ್ಶನ, ಯೂಟ್ಯೂಬ್‌ಗಳಲ್ಲೂ ಅವರ ಅನೇಕ ಪ್ರವಚನಗಳು ಬಿತ್ತರಗೊಂಡಿವೆ.

ಪರಮಹಂಸರ ಮತ್ತು ಶ್ರೀಮಾತೆಯವರ ಅವತರಣವಾಗಿ ಶತಮಾನವೇ ಆಗಿದ್ದರೂ ಅವರೀರ್ವರ ಜೀವನದ ಎಷ್ಟೋ ಪ್ರಸಂಗಗಳಲ್ಲಿ ವಿಶಿಷ್ಟವಾದ, ನಿಗೂಢವಾದ, ದೈವಿಕ ರಹಸ್ಯಗಳನ್ನು ಧ್ಯಾನನಿಷ್ಠವಾದ ಸೂಕ್ಷ್ಮ ಅವಲೋಕನದಿಂದ, ಮಾತ್ರ ಕಾಣಬಹುದಾಗಿದೆ. ಅವುಗಳಲ್ಲಿ 'ಷೋಡಶೀಪೂಜೆ'ಯೂ ಒಂದು. ವಿಶ್ವಸಂಕಲ್ಪದ ಮಹತ್ವದ ಆಯೋಜನೆ, ಅಂದಿನ ಆ ದಿನಗಳಲ್ಲಿ ಸರ್ವಧರ್ಮ ಸಮನ್ವಯದ ಸ್ವಾನುಭವದ ಬೋಧೆಯನ್ನು ತಮ್ಮ ಬದುಕಿನ ಮೂಲಕ ಮಾನವಲೋಕಕ್ಕೆ ತಿಳಿಸಬೇಕಾದದ್ದು ಎಷ್ಟು ಆವಶ್ಯಕ, ಅನಿವಾರ್ಯ ಅಂಶವಾಗಿತ್ತೋ ಅಷ್ಟೇ ಸ್ತ್ರೀತ್ವದ ಅದರಲ್ಲೂ ಸನಾತನ ಧರ್ಮದ ಸಾರಸ್ವರೂಪವಾದ ಸ್ತ್ರೀತ್ವದ, ಮಾತೃತ್ವದ ಔನ್ನತ್ಯದ ಪುನರುಜ್ಜೀವನದ ಆವಶ್ಯಕತೆ, ಅನಿವಾರ್ಯತೆ ಇತ್ತು. ಈ ಕಾರಣಕ್ಕಾಗಿಯೇ ಪರಮಹಂಸರ ಅವತರಣದ ಲೀಲಾಪ್ರಸಂಗಗಳಲ್ಲಿ ಕ್ಷೇತ್ರ ನಿರ್ಮಾಪಕಿಯಾಗಿ ರಾಣಿರಾಸಮಣಿ, ಗುರುವಾಗಿ ಹಾಗೂ ಪರಮಹಂಸರ ಮಹತ್ತನ್ನು ವಿದ್ವತ್ಪೂರ್ಣವಾಗಿ ಲೋಕಕ್ಕೆ ಸಾರಿದ ಮಹಾ ಮಹಿಳೆಯಾಗಿ ಯೋಗೇಶ್ವರಿ ಭೈರವಿ ಬ್ರಾಹ್ಮಣಿ ಆಗಮಿಸಿದರು. ಇವರೀರ್ವರ ಪಾತ್ರಕ್ಕಿಂತ ಹಿರಿದಾದ ಮಾನವಕುಲದ ಉದ್ಧಾರದ ಗುರುತರ ಹೊಣೆಗಾರಿಕೆಯನ್ನು ನಿರ್ವಹಿಸಲು ಸಹಧರ್ಮಿಣಿಯಾಗಿ, ಸಹಯೋಗಿನಿಯಾಗಿ ಸಹಕಾರಣಿಯಾಗಿ ಶ್ರೀಶಾರದಾಮಣಿ ಆಗಮಿಸಿದರು.

ಶ್ರೀರಾಮಕೃಷ್ಣ ಪರಮಹಂಸರು ತಮ್ಮ ಹನ್ನೆರಡು ವರ್ಷಗಳ ಪರಮಾದ್ಭುತ ಸಾಧನೆಯ ಸಾರಸರ್ವಸ್ವವನ್ನೆಲ್ಲ ಷೋಡಶೀಪೂಜೆಯ ಮೂಲಕ ಈ ಮಹಾಮಾತೆಯಲ್ಲಿ ಆವಾಹನೆ ಮಾಡಿದರು. ಇದುವರೆವಿಗೂ ಮಾನವಲೋಕ ಎಂದೂ ಕಂಡರಿಯದ ಮಹತ್ತರವಾದ ಆವಾಹನೆ ಮಹತ್ತರವಾದ ಧಾರಣೆ! ಭೂಮಾತೆಯ ಧಾರಣಾಶಕ್ತಿಯಂತೆ! ಸೃಷ್ಟಿಯಲ್ಲಿನ ಸೃಜನಶಕ್ತಿ, ಸಂಚಲನ ಶಕ್ತಿ, ಸಂರಕ್ಷಣ ಶಕ್ತಿ ಧಾರಣಾಶಕ್ತಿ ಯಾವಾಗಲೂ ಗುಪ್ತ, ಅದರಿಂದಾಗುವ ಕಾರ್ಯಕಲಾಪಗಳೆಲ್ಲ ವ್ಯಕ್ತ. ಸೂಕ್ಷ್ಮ ಅವಲೋಕನಕ್ಕೆ ಮಾತ್ರ ಎರಡೂ ಕಾಣುತ್ತವೆ.

ಷೋಡಶೀಪೂಜೆಯ ಅಂತರಾರ್ಥದತ್ತ ಚಿಂತನೆ ಹರಿದಾಗ ಐದು ಧಾರೆಗಳಲ್ಲಿ ಅದರ ಮಹತ್ವದ ಹೊಳಹು ಹೊಳೆಯುತ್ತದೆ. ಮೊದಲನೆಯದಾಗಿ ಈ ಪೂಜೆ ಸಲ್ಲಿಸಿದ ಈ ಮಹಾನ್ ಅರ್ಚಕ ಯಾರು? ಎರಡನೆಯದಾಗಿ ಪೂಜಿಸಿದ್ದು ಯಾವ ಮಹಾತಾಯಿಯನ್ನು? ಮೂರನೆಯದಾಗಿ ಪೂಜಿಸಿದ್ದು ಯಾವ ದಿವ್ಯಸ್ಥಾನದಲ್ಲಿ? ನಾಲ್ಕನೆಯದಾಗಿ ಹಾಗೆ ಪೂಜಿಸಿದ ಪೂಜೆಯ ಮಹತ್ತೇನು? ಐದನೆಯದಾಗಿ ಪೂಜೆಯ ಮಹಾಸಂಕಲ್ಪ ಏನು? ಮಹದುದ್ದೇಶ ಏನು? ಇವೆಲ್ಲ ಗುಪ್ತಗಾಮಿನಿ!

## ಪೂಜಕ ಪರಮಹಂಸರ ಮಹತ್ವ

ಷೋಡಶೀಪೂಜೆ ನಡೆದದ್ದು ೧೮೭೨ರಲ್ಲಿ ಅಮಾವಾಸ್ಯೆಯಂದು, ಅದೂ ಫಲಹಾರಿಣಿ ಕಾಳೀಪೂಜೆಯ ದಿನ. ಚಂದ್ರಮಂಡಲದ ನಿರ್ವಾಣ ಸ್ಥಿತಿ. ಕೃಷ್ಣಪಕ್ಷ ಮುಗಿದು ಶುಕ್ಲಪಕ್ಷದ ಪ್ರಾರಂಭಕ್ಕೆ ಮಧ್ಯಂತರ ದಿನ ಚಂದ್ರಮಂಡಲದಲ್ಲಿ ಆವಾಹಿತವಾದ ಸೂರ್ಯನ ಕಾಂತಿ ಭೂಮಂಡಲದಲ್ಲಿ ವಿಲೀನವಾಗುವುದು ಕೃಷ್ಣಪಕ್ಷ ಪೂರ್ಣ ಛಾಯಾರೂಪ ಅಮಾವಾಸ್ಯೆ. ಮತ್ತೆ ಸೂರ್ಯಕಾಂತಿಯ ಆವಾಹನೆ ಶುಕ್ಲಪಕ್ಷ. ಪೂರ್ಣಕಾಂತಿರೂಪ ಪೂರ್ಣಿಮಾ. ಒಂದು ಕ್ಷಯಪಕ್ಷ, ಇನ್ನೊಂದು ವೃದ್ಧಿಪಕ್ಷ. ಷೋಡಶೀಪೂಜೆ ಅಮಾವಾಸ್ಯೆಯಂದು ನಡೆದದ್ದು ಮುಂದಿನ ಷೋಡಶಕಲೆಯ ಪ್ರವರ್ಧಮಾನದ ಸೂಚನೆ.

ಭಗವತಿಯನ್ನು ಪೂಜಿಸಿದ ಪರಮಹಂಸರು 'ಹಂಸಃ ಸೋಽಹಂ ಸೋಽಹಂ ಹಂಸಃ' ಎಂಬ ಹಂಸ ಮಂತ್ರದ ಪರಮಸಿದ್ಧಿಯ ನಿಲುವಿನಲ್ಲಿದ್ದವರು, ಬ್ರಹ್ಮಾನಂದ ರಸಸಿದ್ಧರು. ಹಂಸ ಸಾಮಾನ್ಯವಾಗಿ ಸರೋವರದ ನೀರಿನ ಮೇಲು ತೇಲುತ್ತಾ ಸಾಗುತ್ತದೆ. ಬೇಕೆಂದಾಗ ಒಳಗೂ ಮುಳುಗಿ ಮತ್ತೆಲ್ಲೋ ಏಳುತ್ತದೆ. ತೀರದಲ್ಲೂ ಸಂಚರಿಸುತ್ತದೆ ಆಕಾಶಕ್ಕೂ ಹಾರುತ್ತದೆ. ಪರಮಹಂಸರು ಭಕ್ತರೊಂದಿಗೂ ಜ್ಞಾನಸಂವಾದದ ಅಮೃತಸಿಂಚನ ಮಾಡುತ್ತ ಆನಂದದಿಂದ ಇರುತ್ತಿದ್ದರು, ನಿರ್ವಿಕಲ್ಪ ಸಮಾಧಿಯಲ್ಲೂ ಮುಳುಗುತ್ತಿದ್ದರು. ನೀಲಿಯಾಕಾಶದಲ್ಲಿ ಆತ್ಮಾರಾಮರಾಗಿ ವಿಹರಿಸುತ್ತ ಏಕಾಂಗಿಯಾಗಿರುತ್ತಿದ್ದರು. ಜಗತ್ತೇ ಜಗನ್ಮಾತೆಯಾಗಿ ಸದಾಕಾಲ ಭಗವದನುಭೂತಿಯಲ್ಲಿ ಇರುತ್ತಿದ್ದವರು. ಸಕಲ ಜೀವರಾಶಿಗಳಲ್ಲಿ ಆತ್ಮಪ್ರಕಾಶವನ್ನು ಕಾಣುತ್ತಿದ್ದವರು. ಮಹಾಭಾವದ ಉದ್ದೀಪನದ ವಿದ್ಯುತ್ ಸ್ಪರ್ಶಕ್ಕೆ ಅವರ ರೋಮರೋಮವೂ ಸ್ಪಂದಿಸುತ್ತಿತ್ತು. ಇಂತಹ ಮಹಾನುಭಾವರಿಂದ ಷೋಡಶೀಪೂಜೆ ನೆರವೇರಿದೆ.

## ಪೂಜಿತೆಯಾದ ಶ್ರೀಮಾತೆಯ ಮಹತ್ವ

ಶ್ರೀಶಾರದಾಮಣಿ ಐದು ವರ್ಷದ ಬಾಲೆಯಾಗಿದ್ದಾಗಲೇ ಶ್ರೀರಾಮಕೃಷ್ಣರು ತಾವೇ ತಮ್ಮ ತಾಯಿಗೆ ಸೂಚನೆ ನೀಡಿದ ಅವರ

ವಧು! ಮುಂದೆ ತಾವು ನಡೆಸಬೇಕಾಗಿರುವ ಈ ಮಹತ್ವದ ಪೂಜೆಗೆ ತಾವೇ ಜೀವಂತ ವಿಗ್ರಹವೊಂದನ್ನು ಆಯ್ಕೆ ಮಾಡಿ ಕೊಂಡರು, ಈ ಪ್ರಸಂಗ ವಿಚಿತ್ರವಿಶೇಷವೇ!

ಮುಂದೆ ತೀವ್ರಸಾಧನೆಯ ತೇಜೋತರಂಗಗಳ ವಿದ್ಯುತ್ ಸ್ಪರ್ಶದಲ್ಲಿ ತಮ್ಮನ್ನು ತಾವೇ ಮರೆತರು, ಪೂರ್ಣವಾಗಿ ಭವತಾರಿಣಿಯ ಶಿಶುವೇ ಆದರು. ಅವರಲ್ಲಿ ಉಕ್ಕಿ ಹರಿಯುತ್ತಿದ್ದ ದಿವ್ಯೋನ್ಮಾದವನ್ನು ಗುರುತಿಸಲಾಗದ ಜನರು ಅವರನ್ನು ಹುಚ್ಚರೆಂದೇ ಕರೆದರು. ಪ್ರಾಪ್ತವಯಸ್ಕರಾಗಿದ್ದು ಜಯರಾಂಬಾಟಿಯಲ್ಲಿದ್ದ ಶಾರದಾಮಣಿಯವರಿಗೂ ಸುದ್ದಿ ಮುಟ್ಟಿತು. ಚಿಂತೆಯಿಂದ ಕುಗ್ಗಲಿಲ್ಲ, ಆತಂಕದಿಂದ ನಲುಗಲಿಲ್ಲ. ತಮ್ಮ ಪತಿ ಎಲ್ಲಿದ್ದಾರೋ ಅಲ್ಲಿಗೆ, ಹೇಗಿದ್ದಾರೋ ಹಾಗೆಯೇ ಕಾಣುವ, ಮುಂದಿನದನ್ನು ಬಂದಂತೆಯೇ ಸ್ವೀಕರಿಸುವ ಒಂದೇ ನಿರ್ಧಾರದಿಂದ ಗಂಗಾಸ್ನಾನ ಯಾತ್ರೆಯ ನಿಮಿತ್ತದಿಂದ ತಾವೇ ದಕ್ಷಿಣೇಶ್ವರಕ್ಕೆ ಪಾದಯಾತ್ರೆಯಿಂದಲೇ ಬಂದರು. ದಾರಿಯಲ್ಲಿ ಜ್ವರದ ತಾಪಕ್ಕೆ ಒಳಗಾಗಿ ನಿತ್ರಾಣದಿಂದ ಮಲಗಿದ್ದಾಗ ನಿದ್ದೆಯ ಮಂಪರಿನಲ್ಲಿ ತಾಯಿ ಕಾಳಿ ಅವರ ಬಳಿ ಕುಳಿತು ತಲೆ ನೇವರಿಸುತ್ತ ಹೇಳಿದಳು, ''ಯೋಚಿಸಬೇಡ, ನಿನಗಾಗಿಯೇ ರಾಮಕೃಷ್ಣರನ್ನು ಕಾಪಾಡಿಕೊಂಡಿದ್ದೇನೆ. ನಾನು ನಿನ್ನ ಅಕ್ಕ'' ಎಂದು ಸಾಂತ್ವನದ ಭರವಸೆ ನೀಡುತ್ತಾಳೆ. ಜಗನ್ಮಾತೆಯ ನಿಗೂಢ ಸಂಕಲ್ಪದ ಮಿಂಚಿನೆಳೆಯನ್ನು ಇಲ್ಲಿ ಕಾಣಬಹುದು.

ಶ್ರೀರಾಮಕೃಷ್ಣರು ತಮ್ಮ ಸ್ಥಿತಿಗತಿಗಳೇನನ್ನೂ ಹೇಳಿಲ್ಲ, ಬರಬೇಕೆಂದು ಕರೆಕಳಿಸಿಲ್ಲ, ಎಲ್ಲ ಅನಿರೀಕ್ಷಿತ. ಮುಂದಿನದೆಲ್ಲ ಅನಿಶ್ಚಿತ. ಆದರೆ ಶಾರದಾಮಣಿಯವರ ಧೀರಗಂಭೀರ ನಡೆಯಲ್ಲಿ ಪರಮಹಂಸರ ಜ್ಞಾನ ವೈರಾಗ್ಯ ಸಾಮ್ರಾಜ್ಯದ ಸಾಮ್ರಾಜ್ಞಿಯಾಗಿಯೇ ಅವರ ಸಾನ್ನಿಧ್ಯದಲ್ಲಿ ನಿಲ್ಲುವ ಗುಪ್ತ ದೃಢ ನಿರ್ಧಾರವಿತ್ತು. ಪಾತ್ರಧಾರಿಯೇ ಸೂತ್ರಧಾರಿಣಿಯೂ ಆದಂತೆ ಭವಿಷ್ಯದ ಸ್ಪಷ್ಟತೆ ಇತ್ತು. ಮುಂದೆ ಅವರು ನಿರ್ವಹಿಸಬೇಕಾಗಿದ್ದ ದೇವಿಸ್ವರೂಪ, ಗುರುಸ್ವರೂಪ ಮತ್ತು ಮಾತೃಸ್ವರೂಪದ ಸಂಗಮದ ಹರಿವಿನ ಪೂರ್ಣ ಅರಿವಿತ್ತು. ನಿರೀಕ್ಷೆಗೂ ಮೀರಿ, ಶ್ರೀರಾಮಕೃಷ್ಣರ ದೈವಿಕ ಪ್ರೀತಿ ಆದರಗಳ ನಡೆನುಡಿಯ ಪವಿತ್ರ ಪರಿಸರದಲ್ಲಿ ಶ್ರೀಮಾತೆಯವರ ಜೀವನ ವಿಶೇಷ ತಿರುವನ್ನು ಪಡೆಯಿತು. ಮಾನವ ಲೋಕದ ಉದ್ಧಾರಕ್ಕೆ, ಮಾತೃತ್ವದ ಉತ್ಥಾನಕ್ಕೆ ಪರಸ್ಪರರಲ್ಲಿ ಉಗಮಿಸಿದ ಮಹಾಸಂಕಲ್ಪವೇ ಷೋಡಶೀ ಪೂಜೆಯ ಪ್ರಸಂಗವಾಗಿ ಸಾಕಾರಗೊಂಡಿತು.

## ಪೂಜಿಸಿದ ಕ್ಷೇತ್ರದ ಮಹತ್ವ

ಶ್ರೀಮಾತೆಯವರು ದಕ್ಷಿಣೇಶ್ವರಕ್ಕೆ ಆಗಮಿಸಿದ ಏಳೆಂಟು ತಿಂಗಳಲ್ಲಿಯೇ ಅವರಿಗೆ ಷೋಡಶೀಪೂಜೆ ನೆರವೇರಿದ್ದು. ಈ ದಿವ್ಯ ಮುಹೂರ್ತಕಾಗಿಯೇ ಆ ಪವಿತ್ರ ಕ್ಷೇತ್ರ ಕಾಯುತ್ತಿತ್ತೊ ಎನ್ನುವಂತೆ! ಗಂಗಾಮಾತೆ ತಾನೇ ಶ್ರೀಶಾರದಾಮಣಿಯವರನ್ನು ಕರೆತಂದಿದ್ದಳು. ಎಲ್ಲಿ ಅವಳು ಜ್ಞಾನಗಂಗೆಯಾಗಿ, ತಪೋಗಂಗೆಯಾಗಿ, ಪ್ರೇಮಗಂಗೆಯಾಗಿ ಹರಿಯುತ್ತಿದ್ದಾಳೊ ಆ ಸಾನ್ನಿಧ್ಯದಲ್ಲಿಯೇ ಈ ಪೂಜೆ ನೆರವೇರಿದ್ದು. ಕಾಲಸ್ವಾಮಿನಿಯಾದ ಭಗವತಿ ಭವತಾರಿಣಿಯ ಆದೇಶದಂತೆ ನಡೆದಿದ್ದು. ಶ್ರೀರಾಧೆ-ಶ್ಯಾಮರ, ಪೂಜಾಕ್ಷೇತ್ರ ದ್ವಾದಶ ಲಿಂಗ ಸ್ವರೂಪದ ಶಿವಕ್ಷೇತ್ರದಲ್ಲಿ ಇದು ನಡೆದಿದ್ದು. ಪರಮಭಕ್ತೆ ರಾಣಿರಾಸಮಣಿ ತನ್ನ ಸುದೀರ್ಘ ತಪಸ್ಸಿನಿಂದ ನಿರ್ಮಿಸಿದ್ದ ತಪೋಸ್ಥಾನ, ಎಲ್ಲಿ ಯೋಗೇಶ್ವರಿ ಭೈರವಿ ಬ್ರಾಹ್ಮಣಿಯ ಮಾರ್ಗದರ್ಶನದಲ್ಲಿ ತಂತ್ರಸಾಧನೆಯಲ್ಲಿ ಸಿದ್ಧಿಪಡೆದು ತಮ್ಮ ಗುರುವಿನಿಂದಲೇ ವಿದ್ವಜ್ಜನರ ಸಮ್ಮುಖದಲ್ಲಿ ಅವತಾರವರಿಷ್ಠರೆಂದು ಘೋಷಿತರಾದರೋ ಆ ಮಹತ್ವದ ಕ್ಷೇತ್ರದಲ್ಲಿ, ಎಲ್ಲಿ ನಿರ್ವಾಣಸಿದ್ಧ ಸಾಧುವರೇಣ್ಯ ತೋತಾಪುರಿಯವರಿಂದ ಶ್ರೀರಾಮಕೃಷ್ಣರು ನಿರ್ವಿಕಲ್ಪ ಸಮಾಧಿಯ ತುರೀಯಾನುಭವವನ್ನು ಪಡೆದರೋ ಆ ಉನ್ನತ ಕ್ಷೇತ್ರದಲ್ಲಿ ಈ ಗುಪ್ತಪೂಜೆ ನಡೆದಿದೆ.

## ಪೂಜಾಸ್ವರೂಪದ ಮಹತ್ವ

'ಷೋಡಶೀ ಪೂಜೆ' ಎನ್ನುವ ನಾಮಾಂಕಿತದಲ್ಲಿಯೇ ವಿಶೇಷಾರ್ಥವಿದೆ, ವಿಶಾಲಾರ್ಥವಿದೆ. ಹದಿನಾರರ ಹರಯದ ಯುವ ಸ್ತ್ರೀಯನ್ನು ಪೂಜಿಸುವುದು ಎಂದಾಗಲೀ ಹದಿನಾರು ರೀತಿಯ ಪೂಜಾದ್ರವ್ಯಗಳಿಂದ ಪೂಜಿಸುವುದು ಎಂದಾಗಲೀ ಅರ್ಥ ಅಷ್ಟಕ್ಕೆ ಸೀಮಿತವಾಗಿಲ್ಲ. ಪರಮಹಂಸ ರಾಮಕೃಷ್ಣರ ಪೂಜೆಯಲ್ಲಿ ಹದಿನಾರು ಚೈತನ್ಯವಾಹಿನಿಯ ಹರಿವು, ಚೈತನ್ಯ ಸ್ವರೂಪದ ಆವಾಹನೆ, ಪ್ರಜ್ವಲನ ಪ್ರವಹಣ ಮತ್ತು ಸಂರಕ್ಷಣದ ವ್ಯಾಪ್ತಿ ಇದೆ.

ಶ್ರೀವಿದ್ಯಾ ಉಪಾಸನೆಯಲ್ಲಿ ಶ್ರೀಲಲಿತಾ ತ್ರಿಪುರಸುಂದರಿಯನ್ನು ಷೋಡಶೀ ತ್ರಿಪುರಾ ಎಂದೇ ಆರಾಧಿಸುತ್ತಾರೆ. ಉಪಾಸನಾ ಮಂತ್ರಕ್ಕೂ ಷೋಡಶ ಮಂತ್ರಾಕ್ಷರಗಳಿವೆ. ಮಾತೃ ಆರಾಧನೆಯಲ್ಲಿ ಈ ಉಪಾಸನಾವಿಧಾನಕ್ಕೆ ಅತ್ಯಂತ ಮಹತ್ವವಿದೆ. ದಶಮಹಾವಿದ್ಯಾ ಸಾಧನೆಯಲ್ಲಿ ಬರುವ ಭಗವತಿಯ ಹತ್ತು ಸ್ವರೂಪಗಳನ್ನು ಶ್ರೀರಾಮಕೃಷ್ಣರು ದರ್ಶನಮಾಡಿದ್ದರು, ಅರುವತ್ನಾಲ್ಕು ರೀತಿಯ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದಿದ್ದರು. ಭವತಾರಿಣಿ ಮಹಾಕಾಳಿಯೇ ಪ್ರಧಾನ ನಿರ್ದೇಶಕಳಾಗಿ ಯೋಗೀಶ್ವರಿ ಭೈರವಿ ಬ್ರಾಹ್ಮಣಿಯ ಮೂಲಕ ಈ ಮಹತ್ವದ ಸಾಧನಾಪಥದಲ್ಲಿ ಮುನ್ನಡೆದು ಅವರು ಪೂರ್ಣ ಯಶಸ್ಸನ್ನು ಪಡೆದರು.

ಸಂಕ್ಷಿಪ್ತವಾಗಿಯಾದರೂ ಸಾಧನಾಪಥದ ರೂಪುರೇಷೆ ತಿಳಿಯದಿದ್ದರೆ ಇಂತಹ ಮಹತ್ವದ ಪೂಜೆಯ ಮಹತ್ತು ತಿಳಿಯುವುದು ಸುಲಭವಲ್ಲ. ಮೊದಲನೆಯದಾಗಿ ಭಗವತಿಯ ಹತ್ತು ಸ್ವರೂಪ, ಎರಡನೆಯದಾಗಿ ಆ ವಿಶ್ವಮಾತೆಯ ಚೈತನ್ಯ ವಾಹಿನಿಯ ಹದಿನಾರು ರೀತಿಯ ಹರಿವು, ಮೂರನೆಯದಾಗಿ ಪೂಜಕನ ಮನೋಧರ್ಮದ ಔನ್ನತ್ಯ.

### i) ಭಗವತಿಯ ಸ್ವರೂಪ

೧. ಮಹಾಕಾಳಿ (ಕಾಲಸ್ವಾಮಿನಿ) ೨. ತಾರಾದೇವಿ (ನಾದರೂಪಿಣಿ, ತಾರಿಣಿ) ೩. ತ್ರಿಪುರ ಸುಂದರಿ (ಸೌಂದರ್ಯ ಸಾರರೂಪಿಣಿ) ೪. ಭುವನೇಶ್ವರಿ (ವಿಶ್ವಸಾಮ್ರಾಜ್ಞಿ ಸ್ವರೂಪಿಣಿ) ೫. ಭೈರವಿ (ತೇಜಸ್ಸಿನ ಮೂಲಸ್ವರೂಪಿಣಿ) ೬. ಛಿನ್ನಮಸ್ತಾ (ಅಹಂಕಾರನಾಶಿನಿ) ೭.ಧೂಮಾವತಿ (ಅಜ್ಞಾನ ಅಂಧಕಾರ ನಿವಾರಿಣಿ) ೮. ಬಗಲಾಮುಖಿ (ದೈತ್ಯ ಸ್ತಂಭಿನಿ) ೯. ಮಾತಂಗಿನಿ (ವಾಕ್‌ಸಿದ್ಧಿದಾಯಿನಿ) ೧೦. ಕಮಲಾತ್ಮಿಕಾ (ಸಂಪತ್ ಪ್ರದಾಯಿನಿ)

### ii) ವಿಶ್ವಮಾತೆಯ ಚೈತನ್ಯವಾಹಿನಿಯ ಹರಿವು

೧) ಭೂಃ ಭುವಃ ಸುವಃ (ಭೂಲೋಕ, ವಾಯು ಲೋಕ, ಅಂತರಿಕ್ಷ)

೨) ದಿವ-ರಾತ್ರಿ-ಸಂಧ್ಯಾ ೩) ಭೂತ-ಭವಿಷ್ಯತ್- ವರ್ತಮಾನ ೪) ಸತ್ವ-ರಜಸ್-ತಮಸ್ ೫) ಇಚ್ಛಾ-ಜ್ಞಾನ- ಕ್ರಿಯಾ ೬) ಇಡಾ-ಪಿಂಗಳಾ-ಸುಷುಮ್ನಾ ೭) ವೈಖರೀ-ಮಧ್ಯಮಾ- ಪಶ್ಯಂತೀ (ಆಡುವ ಮಾತು-ಮನದ ಮಾತು-ಆತ್ಮದ ಮಾತು) ೮) ಸ್ಥೂಲ-ಸೂಕ್ಷ್ಮ-ಕಾರಣಶರೀರ ೯) ಸೃಷ್ಟಿ-ಸ್ಥಿತಿ-ಲಯ ೧೦) ಮಾನವೌಘ-ದಿವೌಘ- ಸಿದ್ಧೌಘ (ಓಘ ಎಂದರೆ ಬೆಳಕಿನ ಹೊಳೆ. ಮಾನವರಲ್ಲಿ ಸಾಮಾನ್ಯ- ದೇವಮಾನವರಲ್ಲಿ ವಿಶೇಷ ಸಿದ್ಧಪುರುಷರಲ್ಲಿ ಅತ್ಯಂತ ವಿಶೇಷ) ೧೧. ಸೂರ್ಯ-ಚಂದ್ರ- ಅಗ್ನಿ ೧೨) ಬಿಂದು-ನಾದ-ಕಲಾ ೧೩) ಋಗ್ವೇದ-ಯಜುರ್ವೇದ-ಸಾಮವೇದ (ಅಥರ್ವಣ ೩ ವೇದಗಳ ಸಾರರೂಪ) ೧೪)ವಾಗ್ಭವಕೂಟ-ಕಾಮರಾಜಕೂಟ-ಶಕ್ತಿಕೂಟ ೧೫) ಜಾಗ್ರತ್ - ಸ್ವಪ್ನ-ಸುಷುಪ್ತಿ ೧೬) ಪೂರಕ-ರೇಚಕ-ಕುಂಭಕ.

### iii) ಪೂಜಕನ ಮನೋಧರ್ಮದ ಔನ್ನತ್ಯ

ಭಗವತಿಯ ಹತ್ತೂ ಸ್ವರೂಪಗಳ ದಿವ್ಯದರ್ಶನವನ್ನು ಶ್ರೀರಾಮಕೃಷ್ಣರು ನಿರಂತರವಾಗಿ ಕಾಣುತ್ತಲೇ ಇರುತ್ತಿದ್ದರು. ವಿಶ್ವಜನನಿಯ ಹದಿನಾರು ರೀತಿಯ ಚೈತನ್ಯವಾಹಿನಿಯ ವಿದ್ಯುತ್ ಧಾರೆಗೆ ಸದಾಸರ್ವದಾ ತಾವೂ ಮಾಧ್ಯಮವಾಗಿ ಬಾಹ್ಯಲೋಕದಲ್ಲಿಯೇ ಅವನ್ನು ಕಾಣುತ್ತಿದ್ದರು.

ಧ್ಯಾನ-ಧ್ಯಾತೃ-ಧ್ಯೇಯ, ಪೂಜಕ-ಪೂಜೆ-ಪೂಜಿತೆ ಎಲ್ಲ ಏಕಮುಖವಾಗಿ ಬ್ರಹ್ಮಾನಂದದ ನೆಲೆಯಲ್ಲಿ ಮೇಲೇರಿ ಸಂಗಮಗೊಂಡ ಅದ್ಭುತ ಸನ್ನಿವೇಶ. ಪತಿ-ಪತ್ನಿ ಬಾಂಧವ್ಯವನ್ನು ಮೀರಿ ನಿಂತ ಲೋಕೋತ್ತರ ತಪೋಧಾಮ ಬಾಂಧವ್ಯ. ತಮ್ಮ ಹನ್ನೆರಡು ವರ್ಷಗಳ ಅಪೂರ್ವ ಸಾಧನೆಯ ತಪಃಫಲವನ್ನೆಲ್ಲ ಭಗವತಿಯ ಶ್ರೀಚರಣದಲ್ಲಿ ಜಪಮಾಲೆ ಸಹಿತವಾಗಿ ಸಮರ್ಪಿಸಿ ಹೃದಯಾಂತರಾಳದಿಂದ ಪ್ರಾರ್ಥಿಸಿದರು: ''ಹೇ ಭಗವತಿ ಮಹಾಯೋಗಿನಿ, ಮಹಾಸಾಮ್ರಾಜ್ಞಿ, ಪರಮಸೌಂದರ್ಯ ಸ್ವಾಮಿನಿ, ತ್ರಿಪುರಾದೇವಿ, ತ್ರಿಲೋಚನ ಕುಟುಂಬಿನಿ, ಸರ್ವಾಂತರ್ಯಾಮಿನಿ, ಸರ್ವವ್ಯಾಪಿನಿ, ಸರ್ವಸಂರಕ್ಷಿಣಿ, ಪವಿತ್ರತಾಸ್ವರೂಪಿಣಿ, ನಿನ್ನ ಶ್ರೀಚರಣಗಳಲ್ಲಿ ನನ್ನ ಸಾಷ್ಟಾಂಗ ಪ್ರಣಾಮ. ಹೇ ಸಿದ್ಧಿಧಾತ್ರಿ ಮಾನವಲೋಕದ ಹಿತಕ್ಕಾಗಿ, ಉದ್ಧಾರಕ್ಕಾಗಿ, ನಿನ್ನ ಕೃಪಾದ್ವಾರವನ್ನು ತೆರೆ ತಾಯಿ, ಹೇ ಆದ್ಯಾಶಕ್ತಿ ಮಹಾಮಾತೆ! ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ, ಚೈತನ್ಯ ರೂಪೇಣ ಸಂಸ್ಥಿತಾ, ಮಾತೃರೂಪೇಣ ಸಂಸ್ಥಿತಾ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ''

ಇದುವರೆಗೆ ಅಧ್ಯಾತ್ಮಕ್ಷೇತ್ರದ ಇತಿಹಾಸದಲ್ಲಿ ಎಂದೂ, ಎಲ್ಲೂ ನಡೆದಿಲ್ಲದ ಅಭೂತಪೂರ್ವ ಮಹಾಸಮರ್ಪಣ ಹಾಗೂ ಮಹಾಧಾರಣ ಮತ್ತು ಮಹಾಸಂಚಲನ. ಈ ಮಹತ್ಕಾರ್ಯದ ನಂತರ ತಮ್ಮ ಮಹತ್‌ಸಾಧನೆಯ ಮಹತ್ಫಲವನ್ನು ಬಹಳ ಸುರಕ್ಷಿತವಾದ ರೀತಿಯಲ್ಲಿ ಇಟ್ಟು ಸಮರ್ಪಕವಾದ ರೀತಿಯಲ್ಲಿ ಸಂಚಲನೆಗೊಳಿಸಿದಂತಹ ಒಂದ ನಿಶ್ಚಿಂತೆ, ನಿರಾಳ, ನೆಮ್ಮದಿ ಶ್ರೀರಾಮಕೃಷ್ಣರಲ್ಲಿ ಕಾಣುತ್ತಿತ್ತೆಂದು ಸ್ವಾಮಿ ಶಾರದಾನಂದರು ಹೇಳುತ್ತಾರೆ.

ಪರಮಹಂಸರ ಈ ದಿವ್ಯತಪೋಧಾರೆಯೇ ಷೋಡಶ ರೂಪದ ಹರಿವಾಗಿ ಷೋಡಶ ಯತಿಗಳಲ್ಲಿ ಹರಿದಿದೆ. ಶ್ರೀಮಾತೆಯವರಿಂದಲೇ ಅವರಿಗೆ ಪ್ರಥಮಭಿಕ್ಷೆಯೂ ಸಂದಿದೆ.

### ಪೂಜೆಯ ಉದ್ದೇಶದ ಮಹತ್ವ

ಪೂಜೆಯ ಸ್ವರೂಪದ ಮಹತ್ವದಲ್ಲಿಯೇ ಪೂಜೆಯ ಉದ್ದೇಶದ ಮಹತ್ವವೂ ಅಂತರ್ಗತವಾಗಿದೆ. ಮಾನವ ಲೋಕದ ಉನ್ನತಿ, ಮಾನವಲೋಕದ ಉದ್ಧಾರ, ಆ ಮೂಲಕ ವಿಶ್ವಮಾನವತೆ, ವಿಶ್ವಕಲ್ಯಾಣ ಮತ್ತು ವಿಶ್ವಶಾಂತಿಯ ಉಗಮ.

ಈ ಎಲ್ಲ ಮಹತ್‌ಸಿದ್ಧಿಗೂ ವಿಶ್ವಮಾತೃತ್ವದ ಪುನರುತ್ಥಾನದ ಅಗತ್ಯ ಅತ್ಯಂತ ಅನಿವಾರ್ಯವಾಗಿತ್ತು. ಅದೂ ಇಂತಹ ಪರಮಶ್ರೇಷ್ಠ ಮಹಾಭಾವದ ಹರಿವಿನಲ್ಲಿ. ಈ ರೀತಿಯ ಮಹಾಭಾವಸಮನ್ವಿತರಾದ ಮಹಾನ್ ಅರ್ಚಕರಿಂದ ಮಹಾಮಾತೆಗೆ ಸಂದ ಷೋಡಶೀಪೂಜೆ ಭಕ್ತಿಭಾವದಿಂದ ಪರಿಭಾವಿಸುವವರಿಗೆ ವಿಶೇಷ ದೃಷ್ಟಿಯನ್ನೂ, ಭಾವಪುಷ್ಟಿಯನ್ನೂ, ದೈವೀ ಆನಂದದ ಸಂತುಷ್ಟಿಯನ್ನೂ ನೀಡುತ್ತದೆ. ಶ್ರೀಮಾತೆಯವರ ಮತ್ತು ಪರಮಹಂಸ ಶ್ರೀರಾಮಕೃಷ್ಣರ ಕೃಪಾವರ್ಷದಿಂದ ಈ ಭಾಗ್ಯ ಪ್ರಾಪ್ತವಾದರೆ ಅದೇ ನಮಗೆಲ್ಲ ಪರಮಸಾರ್ಥಕತೆಯ ಪರಮನಿಧಿ.

### ಪರಮಾರ್ಥ ಪ್ರದಾತೆ ಶ್ರೀಮಾತೆ

ತಮ್ಮ ದಿನನಿತ್ಯದ ದಿನಚರ್ಯೆಯಲ್ಲಿ ಮಾತ್ರವಲ್ಲದೆ ಹಲವು ವಿಶೇಷ ಸಂದರ್ಭಗಳಲ್ಲಿ ತಮ್ಮ ಅಂತಃಸತ್ವದ ಪರಮಾರ್ಥ ನಿಧಿಯನ್ನು ಮಾನವಲೋಕದ ಶ್ರೇಯಸ್ಸಿಗಾಗಿ ಶ್ರೀಮಾತೆಯವರು ಗುಪ್ತವಾಗಿ ಹರಿಸಿದ್ದಾರೆ. ಶ್ರೀರಾಮಕೃಷ್ಣರು ಬ್ರಹ್ಮಲೀನರಾದ ಮೇಲೆ ಕೆಲವೇ ದಿನಗಳಲ್ಲಿ ತಮ್ಮ ನಿಕಟ ಭಕ್ತರೊಂದಿಗೆ ಶ್ರೀಮಾತೆಯವರು ಬೃಂದಾವನ ಯಾತ್ರೆಯನ್ನು ಕೈಗೊಂಡರು. ಪರಮಹಂಸರಿಗೆ ಆ ಕ್ಷೇತ್ರ ಅತ್ಯಂತ ಭಾವೋದ್ದೀಪನೆಯನ್ನು ನೀಡುತ್ತಿದ್ದ ಕ್ಷೇತ್ರ, ಶ್ರೀಕೃಷ್ಣನ ಲೀಲಾಭೂಮಿಕೆ. ಬೃಂದಾವನದಲ್ಲಿದ್ದಾಗ ಶ್ರೀಮಾತೆಯವರಲ್ಲಾದ ಭಾವಪರಿವರ್ತನೆ 'ಯಥಾಗ್ನೇರ್ದಾಹಿಕಾ ಶಕ್ತೀ ರಾಮಕೃಷ್ಣೇ ಸ್ಥಿತಾ ಹಿ ಯಾ' ಎಂಬುದಕ್ಕೆ ಸಾಕ್ಷಿಯಾಗಿದೆ. ಪತಿವರ್ಯರಲ್ಲಿದ್ದ ಮಹಾಭಾವ, ಧ್ಯಾನಗಮ್ಯವಾದ ಚೈತನ್ಯಪ್ರಕಾಶ, ತಪೋಮಯವಾದ ವಿದ್ಯುತ್ ಕಾಂತಿ ಪೂರ್ಣವಾಗಿ ಅವರಲ್ಲಿ ಪ್ರತಿಫಲಿಸಿತು.

ಎರಡನೆಯ ಪ್ರಸಂಗ : ತೀರ್ಥಯಾತ್ರೆಯನ್ನು, ಮುಗಿಸಿ ಕಾಮಾರಪುಕುರದಲ್ಲಿ ಹುಲ್ಲುಚಾವಣಿಯ ಕುಟೀರದಲ್ಲಿ ಒಬ್ಬರೇ ಏಕಾಂತವಾಸದಲ್ಲಿದ್ದರು. ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಹೋದಂತೆ ದಿವ್ಯಧಾಮದಲ್ಲಿದ್ದ ಪರಮಹಂಸರ ಪರಮ ಸಾನ್ನಿಧ್ಯದ ದಿವ್ಯಾನುಭವ ಪರಾಪರ ರಹಸ್ಯಯೋಗಿನಿ ಶ್ರೀಮಾತೆಯವರಿಗೆ ಹೇಗೆ ಹೇಗೆ ಆಯಿತು, ಯಾವ ಯಾವ ರೀತಿ ಆಯಿತು ಅವೆಲ್ಲವೂ ಅವರೊಬ್ಬರಿಗೆ ಮಾತ್ರ ವೇದ್ಯ !

ಮೂರನೆಯ ಪ್ರಸಂಗ : ೧೮೯೦ರಲ್ಲಿ ಬೋಧ್‌ಗಯಾದಲ್ಲಿ ಅವರು ಸಲ್ಲಿಸಿದ ಬಹು ಮಹತ್ವದ ಪ್ರಾರ್ಥನೆ. ಅಲ್ಲಿನ ಬೌದ್ಧ

ಯತಿಗಳ ಸಾಧನಾ ತತ್ಪರತೆ ಅಲ್ಲಿನ ಬೌದ್ಧವಿಹಾರ ಇವೆಲ್ಲವನ್ನೂ ಕಂಡು, ಇಂಥ ಒಂದು ಸಾಧನಾಕ್ಷೇತ್ರಕ್ಕಾಗಿ ಸಾಧುನಿವಾಸಕ್ಕಾಗಿ ಸರ್ವಸಂಗಪರಿತ್ಯಾಗಿಗಳಾಗಿ ಪರಮಹಂಸರಿಗೆ, ತಮ್ಮ ಬದುಕನ್ನು ಸಮರ್ಪಣೆ ಮಾಡಿದ ಸಾಧುವೃಂದಕ್ಕೆ ಎಲ್ಲ ರೀತಿಯಿಂದ ಸಾಧನಾನುಕೂಲಕ್ಕೆ ಅನುಕೂಲವಾದ ಪರಿಸರವಿರುವ ಮಠದ ನಿರ್ಮಾಣಕ್ಕಾಗಿ ತೀವ್ರವಾದ ಮಾತೃಪ್ರೇಮದಿಂದ ಪ್ರಾರ್ಥಿಸಿದರು. ಸಂಘಜನನಿ ಶಕ್ತಿರೂಪಿಣಿಯ ಆ ಶಕ್ತಿಯುತ ಪ್ರಾರ್ಥನೆ ಕೆಲವೇ ವರ್ಷಗಳಲ್ಲಿ ಸಾಕಾರರೂಪ ತಾಳಿತು.

ಕೊನೆಯದಾಗಿ ಎಲ್ಲಕ್ಕಿಂತ ಮುಖ್ಯಪ್ರಸಂಗ ೧೮೯೩ರಲ್ಲಿ ಶ್ರೀಮಾತೆಯವರು ಶಾಂತವಾಗಿ ನಿರಾಡಂಬರವಾಗಿ ನಡೆಸಿದ ಅತ್ಯಂತ ಮಹತ್ವದ 'ಪಂಚಾಗ್ನಿತಪ'. ಪರಮಹಂಸರ ನಿಕಟ ಭಕ್ತರಾಗಿದ್ದ ಗೃಹಸ್ಥ ಭಕ್ತ ನೀಲಾಂಬರ ಬಾಬು ಅವರ ಮನೆಯ ಮೇಲಿನ ತಾರಸಿಯ ಹೊರವಲಯದಲ್ಲಿ, ಏಳು ದಿನಗಳವರೆಗೆ, ಬೆಳಗಿನ ಸೂರ್ಯೋದಯದಿಂದ ಸಂಜೆಯ ಸೂರ್ಯಾಸ್ತದ ವರೆಗೆ, ನಾಲ್ಕೂ ದಿಕ್ಕಿನಲ್ಲಿ ನಾಲ್ಕು ಅಗ್ನಿಕುಂಡಗಳ ಮೇಲೆ, ಆಕಾಶದಲ್ಲಿ ಬೆಳಗುವ ಸೂರ್ಯ ಇವುಗಳ ಮಧ್ಯದಲ್ಲಿ ತಾವು ಆಸೀನರಾಗಿ ತಪಸ್ಸನ್ನು ಆಚರಿಸಿದರು.

ಅಗ್ನಿ ಆರಾಧನೆ ಸನಾತನ ಧರ್ಮಪರಂಪರೆಯಲ್ಲಿ ಋಷಿಮುನಿಗಳಿಂದ ನಡೆದಿರುವ ಪ್ರಮುಖವಾದ ಆರಾಧನೆ. ಎಲ್ಲ ದೈವಶಕ್ತಿಯ ಆವಾಹನೆ, ಸಂಚಲನೆ ಮತ್ತು ಸಂರಕ್ಷಣೆಗೆ ಯಜ್ಞೇಶ್ವರನ ಆರಾಧನೆಯ ಮಾಧ್ಯಮ ಅತ್ಯಂತ ಉಜ್ವಲ ಮಾಧ್ಯಮ, ಪೂರ್ಣ ಸಫಲತೆಯ ಮಾಧ್ಯಮ.

ಪ್ರಕೃತಿಯಲ್ಲಿಯೇ ಭೂಮಂಡಲದಿಂದ ಹಿಡಿದು ಗಗನ ಮಂಡಲದವರೆಗೆ ಸೂರ್ಯ-ಚಂದ್ರ-ಅಗ್ನಿ ಆರಾಧನೆ ನಿರಂತರವಾಗಿ ನಡೆಯುತ್ತಿದೆ. ಐದು ಪಂಚಭೂತ ತತ್ತ್ವ ಪಂಚಪ್ರಾಣ ಮತ್ತು ಪಂಚಾಗ್ನಿ ಸಂಯೋಜನೆಯಿಂದಲೇ ಕಾರ್ಯಕಲಾಪವೆಲ್ಲ ನಡೆಯುತ್ತಿವೆ.

ವೈಜ್ಞಾನಿಕ ಹಿನ್ನೆಲೆಯಿಂದಲೂ ಸೋಲಾರ್ ಎನರ್ಜಿ, ಲೂನಾರ್ ಎನರ್ಜಿ ಮತ್ತು ಅರ್ತ್ ಎನರ್ಜಿ ಈ ಮೂರರ ಸಂಯೋಗದಿಂದಲೇ ಲೋಕದ ಎಲ್ಲ ಕಲಾಪಗಳ ನಿರ್ವಹಣೆ ನಡೆದಿದೆ. ಸೃಷ್ಟಿಯ ಒಂದು ಭಾಗವಾದ ಮಾನವ ಶರೀರದಲ್ಲಿಯೂ ಈ ಮೂರು ಅಗ್ನಿತೇಜಸ್ಸಿನ ಸಂಚಲನದಿಂದಲೇ ಎಲ್ಲ ಚಲನ- ವಲನಗಳೂ ನಡೆಯುತ್ತಿವೆ. ಚಂದ್ರ-ಸೂರ್ಯ-ಅಗ್ನಿ ಈ ಮೂರರ ಸಂಲಗ್ನತೆಯಿಂದ ಉತ್ಪನ್ನವಾಗುವ ವಿಶೇಷ ಪ್ರಕಾಶಶಕ್ತಿ ವಿದ್ಯುತ್ ಧಾರೆ. ನಭೋಮಂಡಲದಲ್ಲಿ ಮಿನುಗುತ್ತಿರುವ ದ್ವಾದಶ ನಕ್ಷತ್ರ ರಾಶಿಮಂಡಲದ ಕಾಂತಿಪರಿಧಿಯ ಹರಿವು ಎಷ್ಟುಗುಪ್ತವೋ ಅಷ್ಟೇ ಶಕ್ತಿಯುತವಾದುದು.

ಪಂಚಪ್ರಾಣಗಳಲ್ಲಿ ಅಪಾನ ಮಾನವ ಶರೀರದ ನಾಭಿಯಲ್ಲಿದ್ದು ಭೂಅಗ್ನಿಯನ್ನು ಪ್ರಜ್ವಲಿಸಿ ಸಂರಕ್ಷಿಸುತ್ತದೆ; ವ್ಯಾನ ವಾಯು ಇಡೀ ಶರೀರದಲ್ಲಿ ವ್ಯಾಪ್ತವಾಗಿ ಹೃದಯ ಕೇಂದ್ರದಲ್ಲಿ ಸೂರ್ಯಾಗ್ನಿಯನ್ನು ನಿರ್ವಹಿಸುತ್ತದೆ. ಸಮಾನಾಗ್ನಿ ವಾಯು ಮನೋವಲಯದಲ್ಲಿದ್ದು ಭ್ರೂಮಧ್ಯೆ ಸೋಮಾಗ್ನಿಯನ್ನು ಸಂರಕ್ಷಿಸುತ್ತದೆ. ಉದಾನ ವಾಯು ಶಿಖೆಯಲ್ಲಿದ್ದು ವಿದ್ಯುತ್ ಸಂಚಲನದಿಂದ ಮೇಧಾಗ್ನಿಯನ್ನು ಕಾಪಾಡುತ್ತದೆ. ಶರೀರದ ರೋಮರೋಮಗಳಲ್ಲಿ ನಕ್ಷತ್ರ ಕಾಂತಿಯ ಪ್ರಭಾವದ ಹರಿವಿರುತ್ತದೆ. ಇದು ಉಪನಿಷತ್ತಿನಲ್ಲಿ ಋಷಿಶ್ರೇಷ್ಠರು ದರ್ಶಿಸಿರುವ ಪ್ರಾಣಾಗ್ನಿವಿದ್ಯೆ.

ಶ್ರೀಮಾತೆಯವರಿಗೆ ವೇದ, ಉಪನಿಷತ್ತಿನ ಅಧ್ಯಯನ ತಿಳಿದಿರಲಿಲ್ಲ. ಮಂತ್ರಗಳ ಬಳಕೆಗಳಿರಲಿಲ್ಲ. ಅವರ ಪಂಚಾಗ್ನಿ ತಪಸ್ಸಿನಲ್ಲಿ ಗ್ರಂಥಜ್ಞಾನವಿರಲಿಲ್ಲ. ಆದರೆ ''ಪಂಥಜ್ಞಾನ'' ಆಳವಾಗಿತ್ತು. ಹೇಗೆಂದರೆ ಅವರು ''ಪ್ರಪಂಚಸಾರೆ ಸಾಧ್ವೀಶೆ'' ಯಾಗಿ ಶ್ರೀರಾಮಕೃಷ್ಣರಿಂದ ಪೂಜಿತರಾಗಿದ್ದವರು, ''ತೀರ್ಥ ಯಜ್ಞತಪೋದಾನ ಯೋಗಸಾರೇ ಜಗನ್ಮಯಿ'' ಆಗಿದ್ದರು. ಎಲ್ಲ ಸಾಕ್ಷಾತ್ತಾಗಿ ಮುಂದಿರುವಾಗ ವಿಧಿವಿಧಾನದ ಅಗತ್ಯವೆಲ್ಲಿ?

ಪರಮಹಂಸ ರಾಮಕೃಷ್ಣರ ಮಹತ್ತರ ಸಾಧನ ಸಿದ್ಧಿ ಸಂಪನ್ನತೆಯ ವಿದ್ಯುತ್‌ತರಂಗ, ಶ್ರೀಶಾರದಾಮಣಿ ದೇವಿಯವರ ವಿಶ್ವಮಾತೃತ್ವದ ದೈವೀಪ್ರೇಮತರಂಗ ಸಂಗಮಿಸಿ ಪಂಚಾಗ್ನಿ ತಪಸ್ಸಿನ ಮೂಲಕ ಮಾನವಲೋಕವನ್ನೆಲ್ಲ ವ್ಯಾಪಿಸಿತು, ತನ್ನ ಯೌಗಿಕ ಪ್ರಕಾಶವನ್ನು ದೇದೀಪ್ಯಮಾನವಾಗಿ ಬೆಳಗಿತು.

ಅದೇ ವರ್ಷದಲ್ಲಿ ವಿಶ್ವಧರ್ಮ ಸಮ್ಮೇಳನದಲ್ಲಿ ಅಮೆರಿಕಾದ ಚಿಕಾಗೋ ನಗರದಲ್ಲಿ ವೀರಸಂನ್ಯಾಸಿ ವಿವೇಕಾನಂದರಿಂದ ಮೊಳಗಿದ ದಿವ್ಯವಾಣಿಯಲ್ಲಿ ಈ ಮಿಂಚಿನ ಹೊಳೆ ಹರಿದು ವಿಶ್ವವೇ ಬೆರಗಾದುದನ್ನು ಕಾಣುವವರು ಕಾಣಬಹುದು. ಅಂದಿನಿಂದ ಇಂದಿನವರೆಗೂ ಮತ್ತು ಮುಂದೆಯೂ ಈ ಬೆಳಕಿನ ಹೊಳೆ ಸರ್ವಧರ್ಮಸಮನ್ವಯದ, ಸರ್ವಯೋಗಸಮನ್ವಯದ, ಸರ್ವದರ್ಶನ ಸಮನ್ವಯದ ತ್ರಿವೇಣಿ ಸಂಗಮದ ಹೊಳೆಯಾಗಿ ಹರಿಯುತ್ತಲೇ ಹೋಗುತ್ತದೆ. ವಿಶ್ವಮಾನವತೆಯನ್ನು ಸಂರಕ್ಷಿಸುತ್ತಿರುವ ವಿಶ್ವಮಾತೃತ್ವ ಶಕ್ತಿ ಈ ದಿವ್ಯಕಾಂತಿಯ ಹೊಳೆಯನ್ನು ಸಂಚಾಲನಗೊಳಿಸಿದೆ. ಇದು ಪರಮಾರ್ಥ ಪ್ರದಾತೆಯಾದ ಶ್ರೀಮಾತೆ ಶಾರದಾದೇವಿಯವರು ಮಾನವಲೋಕಕ್ಕೆ ನೀಡಿದ ಪರಮಾರ್ಥ ಪಂಚಾಗ್ನಿ ಅವರ ಪಂಚಾಗ್ನಿ ತಪಸ್ಸಿನ ಅಗ್ನಿಮಾಧ್ಯಮದ ಮೂಲಕ.

ಶ್ರೀರಾಮಕೃಷ್ಣ ಮಹಾಸಂಸ್ಥೆಗಳಲ್ಲಿ ವಿಶೇಷ ದಿನಗಳಲ್ಲಿ ಆಚರಿಸುವ ಹೋಮಕಾರ್ಯಗಳಲ್ಲಿ ಹೋಮಾಗ್ನಿಕುಂಡದಲ್ಲಿ ಜ್ವಲಿಸುವ ಅಗ್ನಿಜ್ವಾಲೆಯಲ್ಲಿ ಶ್ರೀಮಾತೆಯವರ ಪಂಚಾಗ್ನಿ ತಪಸ್ಸಿನ ತಪೋಜ್ವಾಲೆಯ ಪ್ರತಿಫಲನವನ್ನು ಕಾಣಬಹುದು.

ಪರಮಹಂಸರ ಹಾಗೂ ಶ್ರೀಮಾತೆಯವರ ಅವತರಣದ ಭೂಮಿಕೆಯಲ್ಲಿ ಪೂರ್ವಾರ್ಧ ಶ್ರೀರಾಮಕೃಷ್ಣರ ದೈವಸ್ವರೂಪ ವ್ಯಕ್ತ; ಶ್ರೀಮಾತೆ ಶಾರದಾದೇವಿ ಗುಪ್ತ. ಆದರೆ ಉತ್ತರಾರ್ಧದಲ್ಲಿ ಶ್ರೀಮಾತೆ ಅವರಲ್ಲಿ ದೈವಸ್ವರೂಪ ವ್ಯಕ್ತ; ಶ್ರೀರಾಮಕೃಷ್ಣ ಸ್ವರೂಪ ಗುಪ್ತ. ಮಾತಿಗೆ ಮೀರಿದ ಮೌನದಲ್ಲಿ ಪರಮಾರ್ಥ ನಿತ್ಯಜೀವನದಲ್ಲಿ ಸರಳ ಸಹಜತೆಯ ಹರಿವಿನಲ್ಲಿ ಕಂಡೂಕಾಣದಂತೆ ಮಿಂಚುತ್ತಿದ್ದ ಪರಮಾರ್ಥ, ಬೋಧೆಗೆ ನಿಲುಕದ ಗುರುತರವಾದ ಧಾರಣಾ ಸಾಮರ್ಥ್ಯದ ಪರಮಾರ್ಥ, ಧ್ಯಾನಿಸಿದಷ್ಟೂ ವಿಸ್ತರಿಸುತ್ತಲೇ ಹೋಗುವ ಅಂತರಾರ್ಥದ ಪರಮಾರ್ಥ ಇವೇ ಶ್ರೀಶಾರದಾಮಣಿ ದೇವಿಯ ದಿವ್ಯ ಜೀವನದ ಪರಮಾರ್ಥ ಪಂಚತೀರ್ಥ.

''ಸರ್ವಸ್ವರೂಪೇ ಸರ್ವೇಶಿ
ಸರ್ವಶಕ್ತಿ ಸಮನ್ವಿತೇ, ಶರಣಂ ತವ ಚರಣಂ ।''